D-942

# ವಿದ್ಯುಚ್ಛಕ್ತಿ ಲೋಕಪಾಲರ ಸಮಕ್ಷಮದಲ್ಲಿ

9/2, 6ನೇ ಮಹಡಿ, ಮಹಾಲ್ಷ್ಮಿ ಚೇಂಬರ್ಸ್, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560 001

**ಉಪಸ್ಥಿತಿ : ಶ್ರೀ ಬಿ.ಎನ್. ಕೃಷ್ಣಯ್ಯ**
ವಿದ್ಯುಚ್ಛಕ್ತಿ ಲೋಕಪಾಲರು

**ಪ್ರಕರಣ ಸಂಖ್ಯೆ OMB/M/G-275/2016**
**ಆದೇಶ ದಿನಾಂಕ : 28.09.2017**

1. ಶ್ರೀ ರಾಮಯ್ಯ
2. ಶ್ರೀ ರಾಮಚಂದ್ರ
3. ಶ್ರೀ ಜಗದೀಶ
4. ಶ್ರೀ ರಮೇಶ
5. ಶ್ರೀಮತಿ ರೂಪ
6. ಶ್ರೀಮತಿ ಸುಲೋಚನ

ಎಲ್ಲರೂ ಮಡ್ಡಿಕೆರೆ, ಬೆಳ್ಳೂರು ಅಂಚೆ, ಮೂಡಿಗೆರೆ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ. ನಿವಾಸಿಗಳು ... ಮೇಲ್ಮನವಿದಾರರು

(ಇವರ ಅಧಿಕೃತ ಪ್ರತಿನಿಧಿ, ಶ್ರೀ ಎಂ.ಎಸ್.ನಾಗೇಶ್‌ಗೌಡ)

V/S

1. ಸಹಾಯಕ ನಿರ್ವಾಹಕ ಇಂಜಿನಿಯರ್ (ನಿರ್ವಹಣೆ ಮತ್ತು ಪಾಲನೆ),
ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿ. (ಮೆಸ್ಕಾಂ),
ಮೂಡಿಗೆರೆ ಉಪ–ವಿಭಾಗ, ಮೂಡಿಗೆರೆ,
ಚಿಕ್ಕಮಗಳೂರು ಜಿಲ್ಲೆ.

(ಸ.ಕಾ.ಇ ಸ್ವಂ ಹಾಜರಿ)

2. ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ,
ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿ. (ಮೆಸ್ಕಾಂ),
ಅಧೀಕ್ಷಕ ಇಂಜಿನಿಯರ್ ರವರ ಕಛೇರಿ,
ನಿರ್ವಹಣೆ ಮತ್ತು ಪಾಲನೆ ವೃತ್ತ ,
ಮಧುವನ್ ಬಡಾವಣೆ ರಸ್ತೆ,
ಚಿಕ್ಕಮಗಳೂರು – 577 101 ... ಪ್ರತಿವಾದಿಗಳು

*****

1. ಈ ಮೇಲ್ಮನವಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗದ (ಗ್ರಾಹಕರ ಕುಂದುಕೊರತೆ ನಿರ್ವಹಣಾ ವೇದಿಕೆ ಮತ್ತು ಲೋಕಪಾಲ್) ನಿಯಮಗಳ ಕಲಂ 21.02ರ ಅಡಿಯಲ್ಲಿ ಗ್ರಾಹಕರ ಕುಂದುಕೊರತೆ ನಿರ್ವಹಣಾ ವೇದಿಕೆ, ಚಿಕ್ಕಮಗಳೂರು ಜಿಲ್ಲೆ, ಇವರ ದಿನಾಂಕ 31.03.2016ರ ಆದೇಶದ ವಿರುದ್ಧ ದಾಖಲಿಸಲಾಗಿದೆ.

2. ದಿನಾಂಕ 23.12.2016ರ ಈ ಪ್ರಾಧಿಕಾರದ ಪತ್ರದಲ್ಲಿ ಮೂಡಿಗೆರೆ ಉಪ–ವಿಭಾಗದ ಸಹಾಯಕ ನಿರ್ವಾಹಕ ಇಂಜಿನಿಯರ್ ರವರಿಂದ ಮೇಲ್ಮನವಿಗೆ ಉತ್ತರವನ್ನು ಕೇಳಲಾಗಿ, ಸಹಾಯಕ ನಿರ್ವಾಹಕ ಇಂಜಿನಿಯರ್, ಮೂಡಿಗೆರೆ ರವರು ತಮ್ಮ ಪತ್ರ ದಿನಾಂಕ 03.01.2017 ರಲ್ಲಿ ಉತ್ತರವನ್ನು ಕಳುಹಿಸಿರುತ್ತಾರೆ.

3. ಮೇಲ್ಮನವಿದಾರರು ದಿನಾಂಕ 19.12.2016ರ ಲಿಖಿತ ಪತ್ರದಲ್ಲಿ ತಮ್ಮ ವಾದವನ್ನು ಈ ಕೆಳಕಂಡಂತೆ ಮಂಡಿಸಿದ್ದಾರೆ.

(೧)ವೋಲ್ಟೇಜ್ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲಾ ವಿಚಾರಗಳನ್ನು ವಿವರಿಸಿ ಆರ್ಡರ್ ನಂ.ಎಂ–69/20/03/2013 ರಂತೆ ಕಾರ್ಯದೇಶವನ್ನು ಅನುಷ್ಠಾನಗೊಳಿಸಿ, ವೋಲ್ಟೇಜ್ ಸಮಸ್ಯೆಯನ್ನು ಬಗೆಹರಿಸಿಕೊಡುವಂತೆ ಕೋರಿ ಮನವಿಯನ್ನು ಎ.ಇ.ಇ. ರವರಿಗೆ ದಾಕಲಿಸಿರುತ್ತೇವೆ.

(೨) ಈ ಪತ್ರಕ್ಕೆ ಉತ್ತರವಾಗಿ ಸದರಿ ಪ್ರಾಧಿಕಾರಿಗಳು, ಸ್ಥಳ ಪರಿಶಿಲಿಸಿ, ಸರಿಪಡಿಸಿಕೊಡುವುದಾಗಿ ಭರವಸೆ ನೀಡಿರುತ್ತಾರೆ. ಆದರೆ 2 ವರ್ಷದ ಹಿಂದೆಯೇ ಸಾಮಗ್ರಿಗಳನ್ನು ತಂದು

ಹಾಕಿರುತ್ತಾರೆಯೇ ವಿನ: ನಮ್ಮ ಸಮಸ್ಯೆಯನ್ನು ಬಗೆಹರಿಸಿ ಕೊಟ್ಟಿರಲಿಲ್ಲ ಮತ್ತು ಯಾವುದೇ ಉತ್ತರ ಸಹ ನೀಡಿರಲಿಲ್ಲ;

(೩)ನಂತರ ಪುನ: ನಾವು ಹಲವಾರು ಬಾರಿ ಖುದ್ದು ಭೇಟಿ ಮಾಡಿ ಮತ್ತು ದೂರವಾಣಿ ಮೂಲಕ ಎಲ್ಲಾ ವಿಚಾರಗಳನ್ನು ವಿವರಿಸಿ, ಸೂಕ್ತ ಕ್ರಮಕೈಗೊಳ್ಳುವಂತೆ ಕೋರಿರುತ್ತೇವೆ.

(೪)ಆದರೆ ಚಿಕ್ಕಮಗಳೂರು ಜಿಲ್ಲೆಯ ಮೆಸ್ಕಾಂ ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆಯ ಮುಂದೆ ದಿನಾಂಕ 02.11.2015 ರಂದು ಅರ್ಜಿ ಸಲ್ಲಿಸುವವರೆಗೆ ಸಹಾಯಕ ಕಾರ್ಯನಿರ್ವಾಃಕ ಇಂಜಿನಿಯರ (ವಿ)ರವರು ಸಮಸ್ಯೆಯನ್ನು ಬಗೆಹರಿಸಿರಲಿಲ್ಲ.

(೫) ಆದ್ದರಿಂದ ಚಿಕ್ಕಮಗಳೂರು ಜಿಲ್ಲೆಯ ಮೆಸ್ಕಾಂ ಗ್ರಾಹಕರ ಕೂಮದುಕೊರತೆಗಳ ನಿವಾರಣ ವೇದಿಕೆಯ ಮುಂದೆ ನಮ್ಮಗಳ, ಮನೆ ಮತ್ತು ಕೃಷಿ ಪಂಪ್‌ಸೆಟ್ ಸ್ಥಾವರಕ್ಕೆ ತಾ; 20.03.2013 ರಿಂದ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವವರೆಗೆ KERC (Licensees Standard performance) Regulations 2004 ರ ಶೆಡ್ಯೂಲ್ 1 ರ (5) ರಲ್ಲಿ ತಿಳಿಸಿರುವಂತೆ ದಿನ ಒಂದಕ್ಕೆ ರೂ.50 ರಂತೆ ಪರಿಹಾರ ನೀಡಬೇಕಾಗಿ ಕೋರಿರುತ್ತೇವೆ ಮತ್ತು ವೋಲ್ಟೇಜ್ ಸಮಸ್ಯೆ ಬಗೆಹರಿಸುವಂತೆ ಮನವಿ ಸಲ್ಲಿಸಿರುತ್ತೇವೆ;

(೬)ಸದರಿ ಮನವಿಯ ವಿಚಾರಣೆಯನ್ನು ದಿನಾಂಕ 08.12.2015 ಮತ್ತು 14.01.2016 ರಂದು ನಡೆಸಲಾಗಿದ್ದು, ನಾವುಗಳು ಹಾಗು ಸಹಾಯಕ ನಿರ್ವಾಹಕ ಅಭಿಯಂತರರು ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆಯ ಮುಂದೆ ಹೇಳಿಕೆಯನ್ನು ನೀಡಿದ್ದಾರೆ. ನಾವುಗಳು ಏಇಇ ಮೂಡಿಗೆರೆ ಇವರ ಹೇಳಿಕೆಯ ಖಂಡಿಕೆವಾರು ಉತ್ತರಕ್ಕೆ ಪ್ರತ್ಯುತ್ತರ ನೀಡಬೇಕೆಂದು ಕೋರಿದರೂ ಸಹ ವೇದಿಕೆ ನಮಗೆ ಅವಕಾಶ ನೀಡಲಿಲ್ಲ;

(೭)ಅಂತಿಮವಾಗಿ ವೋಲ್ಟೇಜ್ ಸಮಸ್ಯೆಯನ್ನು ಪರಿಹರಿಸಲು ಹೆಚ್ಚುವರಿ ಪರಿವರ್ತಕ ಅಳವಡಿಸಿ ಕಾಮಗಾರಿಯನ್ನು ವಹಿಸಿರುವ ಶಬರಿ ಎಲೆಕ್ಟ್ರಿಕಲ್ಸ್, ಬಣಕಲ್‌ರವರಿಗೆ ತುರ್ತಾಗಿ ಕಾಮಿಗಾರಿಯನ್ನು ನಿರ್ವಹಿಸಲು ಸೂಚಿಸುವುದು ಅಥವಾ ಪರಿವರ್ತಕ ಅಳವಡಿಸಲು ಬದಲಿ ವ್ಯವಸ್ಥೆ ಮಾಡುವುದು. ಸಹಾಯುಕ ಕಾರ್ಯನಿರ್ವಾಹಕ ಅಭಿಯಂತರರು ಇವರ ಹೇಳಿಕೆಯಂತೆ ಸದರಿ ಸ್ಥಳಕ್ಕೆ 63 ಕೆವಿ ಪರಿವರ್ತಕ ಕೇಂದ್ರದಿಂದ ವಿದ್ಯುತ್

ಸರಬರಾಜುಗುತ್ತಿದ್ದು, ಹಾಲಿ ಈ ಪರಿವರ್ತಕದ ಮೇಲೆ 45 ಹೆಚ್.ಪಿ ನೀರಾವರಿ ಪಂಪ್‌ಸೆಟ್‌ಗಳನ್ನು ಹೊಂದಿರುವ ಗ್ರಾಹಕರು ಬಾಕಿ ಪಾವತಿಸದೇ ಇರುವುದರಿಂದ ವಿದ್ಯುತ್ ನಿಲುಗಡೆ ಮಾಡಲಾಗಿರುತ್ತದೆ. ಪ್ರಸ್ತುತ 63 ಕೆ.ವಿ ಪರಿವರ್ತಕದ ಮೇಲೆ 10 ಹೆಚ್.ಪಿ. + 25 ಕೆ.ವಿ ಮಾತ್ರ ಹೊರೆ ಇರುತ್ತದೆ. ದೂರುದಾರರು ಕೇಳಿರುವ ಪರಿಹಾರವು ಸಮಂಜಸವಾಗಿರುವುದಿಲ್ಲವೆಂದೂ ಹಾಗೂ ಅಹವಾಲುದರರಾದ ಶ್ರೀ ರಾಮಚಂದ್ರರವರು ಹೇಳಿಕೆ ನೀಡಿರುವಂತೆ ಕಛೇರಿ ಅಧಿಕಾರಿಗಳು ಅರ್ಜಿಯಲ್ಲಿ ತಿದ್ದುಪಡಿ ಮಾಡಿರುವ ಸತ್ಯಾಸತ್ಯೆಯನ್ನು ತನಿಖೆ ನಡೆಸಿ ಕ್ರಮ ಕೈಗೊಳ್ಳಲು ಆದೇಶಿಸಲಾಗಿದೆ ಎಂದು ತೀರ್ಮಾನ ನೀಡಲಾಗಿದೆ.

(೮)ಸದರಿ ತೀರ್ಮಾನದ ಪ್ರತಿಯನ್ನು ನಿಗದಿತ ಅವಧಿಯೊಳಗೆ ಮನವಿದಾರರಿಗೆ ಅಥವಾ ಪ್ರತಿವಾದಿಗಳಿಗೆ ಕಳುಹಿಸಲೇ ಇಲ್ಲ. ಚಿಕ್ಕಮಗಳೂರು ಜಿಲ್ಲೆಯ ಮೆಸ್ಕಾಂ ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆಯ ಯಾವುದೇ ತೀರ್ಮಾನ ನೀಡದೇ ಇರುವ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರು, ಮೆಸ್ಕಾಂ, ಮಂಗಳೂರು, ಇವರಿಗೆ ಕೊರಿಯರ್ ಮೂಲಕ 10.06.2016 ರಂದು ನಮ್ಮ ಪ್ರತಿನಿಧಿಯಾದ ಶ್ರೀ ನಾಗೇಶ್ ಗೌಡ ಎಂ.ಎಸ್, ಇವರು ಮನವಿ ಸಲ್ಲಿಸಿರುತ್ತಾರೆ. ಈ ಬಗ್ಗೆಯೂ ಚಿಕ್ಕಮಗಳೂರು ಜಿಲ್ಲೆಯ ಮೆಸ್ಕಾಂ ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಯ ಯಾವುದೇ ತೀರ್ಮಾನ ನೀಡಲಿಲ್ಲ. ಅಂತಿಮವಾಗಿ ಈ ವಿಚಾರದ ಬಗ್ಗೆ 03.10.2016ರಂದು ಕೇಂದ್ರ ಮಾಹಿತಿ ಹಕ್ಕು ಅಧಿನಿಯಮದಡಿ ಅಧೀಕ್ಷಕ ಇಂಜಿನಿಯರ್ (ವಿ) ಮೆಸ್ಕಾಂ ಗ್ರಾಹಕರ ಕುಂದುಕೊರತೆಗಳ ನಿವಾರಣಾಧಿಕಾರಿಗಳಿಗೆ "ದಿನಾಂಕ 02.11.2015 ರಂದು ಸಲ್ಲಿಸಿದ ಮನವಿಗೆ ಮೆಸ್ಕಾಂ ಗ್ರಾಹಕರ ಕೂಮದುಕೊರತೆಗಳ ನಿವಾರಣಾಧಿಕಾರಿಗಳು ತೆಗೆದುಕೊಂಡ ಕ್ರಮ ಕೋರಿ" ನಮ್ಮಲ್ಲಿ ಒಬ್ಬರಾದ ಶ್ರೀ ರಾಮಚಂದ್ರ ಅರ್ಜಿ ಸಲ್ಲಿಸಿರುತ್ತಾರೆ.

(೯)ಸದರಿ ಕೋರಿದ ಮಾಹಿತಿಯು ಅಧೀಕ್ಷಕ ಇಂಜಿನಿಯರ್ (ವಿ) ಮತ್ತು ಮೆಸ್ಕಾಂ ಗ್ರಾಹಕರ ಕುಂದುಕೊರತೆಗಳ ನಿವಾರಣಾಧಿಕಾರಿಗಳ ಕಛೇರಿಗೆ ಸಂಬಂಧಪಟ್ಟಿದ್ದು ಮತ್ತು ಕೋರಿದ ಮಾಹಿತಿ ಅವರ ಕಛೇರಿಯಲ್ಲಿ ಲಭ್ಯವಿದ್ದಯಾಗ್ಯೂ ಉದ್ದೇಶ ಪೂರ್ವಕವಾಗಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಅರ್ಜಿದಾರನಿಗೆ ವಿಳಂಬವಾಗಿ ಮಾಹಿತಿ ನೀಡಬೇಕೆಂಬ ಏಕೈಕ

ಉದ್ದೇಶದಿಂದ ಮಾಹಿತಿ ಹಕ್ಕು ಅಧಿನಿಯಮದ ಪ್ರಕರಣ ಸಂ.6(3) ರಂತೆ ಕಾರ್ಯನಿರ್ವಾಹಕ ಇಂಜಿನಿಯರ್, ಮೆಸ್ಕಾಂ ವಿಭಾಗ ಕಛೇರಿ ಇವರಿಗೆ ವರ್ಗಾಯಿಸಿ ನಮ್ಮಲ್ಲಿ ಒಬ್ಬರಾದ ಶ್ರೀ ರಾಮಚಂದ್ರ ಇವರಿಗೆ ಹಿಂಬರಹ ನೀಡಿರುತ್ತಾರೆ.

(೧೦) ಈ ಬಗ್ಗೆ ಶ್ರೀ ರಾಮಚಂದ್ರ ಇವರು ಆಕ್ಷೇಪ ವ್ಯಕ್ತಪಡಿಸಿ, ಅಧೀಕ್ಷಕ ಇಂಜಿನಿಯರ್ (ವಿ) ಪಾಲನೆ ಮತ್ತು ನಿರ್ವಹಣೆ ವೃತ್ತ, ಚಿಕ್ಕಮಗಳೂರು ಇವರಿಗೆ ಪತ್ರ ಬರೆದು, ಯಥಾ ಪ್ರತಿಯನ್ನು ಮಾನ್ಯ ಮುಖ್ಯ ಇಂಜಿನಿಯರ್ (ವಿ), ವಲಯ ಕಛೇರಿ, ಮಂಗಳೂರು ಇವರಿಗೆ ಕಳುಹಿಸಿರುತ್ತಾರೆ.

(೧೧) ಏತನ್ಮಧ್ಯೆ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಪಾಲನೆ ಮತ್ತು ನಿರ್ವಹಣಾ ವಿಭಾಗ ಚಿಕ್ಕಮಗಳೂರು ಇವರು, ಅಧೀಕ್ಷಕ ಇಂಜಿನಿಯರ್ ಇವರ ಕಛೇರಿಯಿಂದ ಮಾಹಿತಿ ಕೋರಿ ಬಂದ ಅರ್ಜಿಯನ್ನು ಪುನ: ಮಾಹಿತಿ ಹಕ್ಕು ಕಾಯಿದೆಯ ಪ್ರಕರಣ ಸಂ.6(3) ರಂತೆ ಸ.ಕಾ.ಎಂ. (ವಿ) ಮುಡಿಗೆರೆ ಉಪ ವಿಭಾಗ ಇವರಿಗೆ ವರ್ಗಾಯಿಸಿರುತ್ತಾರೆ. ಈ ವರ್ಗಾಯಿಸಿದ ಅರ್ಜಿಗೆ ಮೂಡಿಗೆರೆ ಸ.ಕಾ.ಇಂ (ವಿ) ಇವರ ಪತ್ರ ದಿನಾಂಕ 11.11.2016ರಲ್ಲಿ ಶ್ರೀ ರಾಮಚಂದ್ರ ಇವರಿಗೆ ದಾರಿ ತಪ್ಪಿಸುವ ಉತ್ತರ ನೀಡಿ, ಈಗಾಗಲೇ ಮಡ್ಡಿಕೆರೆ ಗ್ರಾಮದ ಲೋವೋಲ್ಟೇಜ್ ಸಮಸ್ಯೆಯನ್ನು ಪರಿಹರಿಸಲು ಮಡ್ಡಿಕೆರೆ ಗ್ರಾಮದಲ್ಲಿ ಹೆಚ್ಚುವರಿ 25 ಕೆವಿಎ ಪರಿವರ್ತಕ ಅಳವಡಿಸುವ ಕಾಮಗಾರಿಯನ್ನು ದಿನಾಂಕ 27.01.2016 ರಂದು ಪೂರ್ಣಗೊಳಿಸಿ, ದಿನಾಂಕ 31.01.2016 ರಂದು ಪರಿವರ್ತಕವನ್ನು ಚಾಲನೆಗೊಳಿಸಿರುವುದಾಗಿ ಅಧೀಕ್ಷಕ ಇಂಜಿನಿಯರ್ (ವಿ), ಮೆಸ್ಕಾಂ ವೃತ್ತ ಕಛೇರಿ, ಚಿಕ್ಕಮಗಳೂರು ಇವರಿಗೆ ಮಾಹಿತಿ ನೀಡಿರುವದಾಗಿಯೂ, ದಿನ ಒಂದಕ್ಕೆ ರೂ.50/– ಪರಿಹಾರ ಕೋರಿರುವ ಹಿನ್ನಲೆಯಲ್ಲಿ ಇದುವರೆಗೂ ಮೇಲಾಧಿಕಾರಿಗಳಿಂದ ಪರಿಹಾರ ನೀಡುವ ಬಗ್ಗೆ ಯಾವುದೇ ಆದೇಶ ಬಂದಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಮುಂದುವರೆದು ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಲು ಅಧೀಕ್ಷಕ ಇಂಜಿನಿಯರ್ (ವಿ) ಮೆಸ್ಕಾಂ ವೃತ್ತ ಕಛೇರಿ, ಚಿಕ್ಕಮಗಳೂರು ಇವರಿಗೆ ಪತ್ರ ಬರೆದಿರುವುದಾಗಿ ತಿಳಿಸಿದ್ದು ಸದರಿ ಪತ್ರದ ಪ್ರತಿಯನ್ನು ಲಗತ್ತಿಸಿರುವುದಾಗಿ ತಿಳಿಸಿ ಪತ್ರ ಬರೆದಿರುತ್ತಾರೆ;

(೧೨) ಅಧೀಕ್ಷಕ ಇಂಜಿನಿಯರ್ (ವಿ) ಮೆಸ್ಕಾಂ ವೃತ್ತ ಕಛೇರಿ ಇವರು ದಿನಾಂಕ 23.11.2016 ಪತ್ರದಲ್ಲಿ ಶ್ರೀ ರಾಮಚಂದ್ರ ಇವರಿಗೆ ಉತ್ತರಿಸಿ, ಕೆಲವೊಂದು ಸ್ಪಷ್ಟೀಕರಣಗಳು ನೀಡಿ, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ ಚಿಕ್ಕಮಗಳೂರು ಇವರ ಆದೇಶವನ್ನು ಕಳುಹಿಸಿಕೊಟ್ಟಿರುತ್ತಾರೆ. ಸದರಿ ಆದೇಶವನ್ನು ಶ್ರೀ ರಾಮಚಂದ್ರ ಇವರಿ ದಿನಾಂಕ 07.12.2016 ರಂದು ತಲುಪಿದೆ. ಸಾಮಾನ್ಯವಾಗಿ ನ್ಯಾಯಾಲಯದ ಆದೇಶ ಮತ್ತು ಮಾಹಿತಿ ಹಕ್ಕು ಅಧಿನಿಯಮದಿ ಕೋರಿದ ಮಾಹಿತಿಯನ್ನು ಸ್ವೀಕೃತಿ ನೊಂದಣಿ ಅಂಚೆ ಮುಖಾಂತರ ಕಳುಹಿಸಬೇಕಾಗಿದ್ದರೂ ಸಹ ಉದ್ದೇಶಪೂರ್ವಕವಾಗಿ ಅಧೀಕ್ಷಕ ಇಂಜಿನಿಯರ್ (ವಿ) ಮೆಸ್ಕಾಂ ವೃತ್ತ ಕಛೇರಿ ಚಿಕ್ಕಮಗಳೂರು ಇವರು ಈ ಆದೇಶವನ್ನು/ಕೋರಿದ ಮಾಹಿತಿಯನ್ನು ಸಾಮಾನ್ಯ ಅಂಚೆ ಮುಖಾಂತರ ಕಳುಹಿಸಿರುತ್ತಾರೆ.

(೧೩) ವಿದ್ಯುಚ್ಛಕ್ತಿ ಓಂಬಡ್ಸ್‌ಮನ್‌ಗೆ ಮೇಲ್ಮನವಿಯನ್ನು ಸಲ್ಲಿಸಲು ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆಯು ನೀಡಿದ ತೀರ್ಮಾನ ಕೈ ಸೇರಿದ 30 ದಿನದೊಳಗೆ ಸಲ್ಲಿಸಬೇಕೆಂದು ಕಾಯಿದೆಯಲ್ಲಿ ಹೇಳಿದೆ. ನಮಗೆ ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ, ಚಿಕ್ಕಮಗಳೂರು ಇವರು ನೀಡಿದ ಆದೇಶ ಕೈ ಸೇರಿದ್ದು ದಿನಾಂಕ 07.12.2016ರಂದು. ಅದೂ ಕೇಂದ್ರ ಮಾಹಿತಿ ಹಕ್ಕು ಅಧಿನಿಯಮದಡಿ ಅರ್ಜಿ ಸಲ್ಲಿಸಿದ ಮೇಲೆ. ಹೀಗಿರುವಾಗ ಗ್ರಾಹಕರ ಕುಮದುಕೊರತೆಗಳ ನಿವಾರಣಾ ವೇದಿಕೆ ಚಿಕ್ಕಮಗಳೂರು ನೀಡಿದ ಆದೇಶ ದಿನಾಂಕ 31.03.2016 ರಿಂದ 30.04.2016ರ ಅವಧಿಯೊಳಗೆ ಮೇಲ್ಮನವಿಯನ್ನು ನ್ಯಾಯಾಧಿಕರಣಕ್ಕೆ ಸಲ್ಲಿಸಲಾಗಲಿಲ್ಲ. ಆದುದರಿಂದ ಮಾನ್ಯ ನ್ಯಾಯಾಧಿಕರಣ ಈ ಕಾಲಮಿತಿಯನ್ನು ಮನ್ನಿಸಿ, ಸದರಿ ಪ್ರಕರಣವನ್ನು ಕೈಗೆತ್ತಿಕೊಂಡು, ನಮ್ಮ ಪರವಾಗಿ ತೀರ್ಮಾನ ನೀಡಬೇಕಾಗಿ ಕೋರುತ್ತೇವೆ.

<u>ಮೇಲಿನ ವಾದದೊಂದಿಗೆ ಮೇಲ್ಮನವಿದಾರರು ಸಲ್ಲಿಸಿರುವ ಆಕ್ಷೇಪಗಳು</u>

ನಮ್ಮ ಪ್ರತಿವಾದಿಗಳು ಹಾಗೂ ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ, ಚಿಕ್ಕಮಗಳೂರು ಇವರು ಪರಿಗಣಿಸಿ ನೀಡಿದ ಆದೇಶದ ವಿಚಾರದ ಬಗ್ಗೆ ಈ ಕೆಳಕಂಡ ಅಂಶಗಳಿಗೆ

ನಾವು ಆಕ್ಷೇಪ ವ್ಯಕ್ತಪಡಿಸುತ್ತಿದ್ದೇವೆ. ಈ ಎಲ್ಲಾ ಅಂಶಗಳನ್ನು ಮಾನ್ಯ ನ್ಯಾಯಾಲಯ ಪರಿಗಣಿಸಿ ತೀರ್ಮಾನ ನೀಡಬೇಕಾಗಿ ಕೋರುತ್ತೇವೆ.

(ಎ) ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ, ಚಿಕ್ಕಮಗಳೂರು ಇವರು ನೀಡಿದ ಆದೇಶದ ಮೊದಲನೆಯ ವಾಕ್ಯದಲ್ಲೇ ಲೋ ವೋಲ್ಟೇಜ್ ಸಮಸ್ಯೆ ಮಡ್ಡಿಕೇರಿ ಗ್ರಾಮದಲ್ಲಿ ಇರುವುದನ್ನು ಒಪ್ಪಿಕೊಂಡಿದೆ. ಇಲ್ಲವಾದಲ್ಲಿ ಮೆ// ಶಬರಿ ಎಲೆಕ್ಟ್ರಿಕಲ್ಸ್ ಇವರ ಕೂಲಿ ಗುತ್ತಿಗೆ ಕಾಮಗಾರಿಯನ್ನು ರದ್ದುಗೊಳಿಸಿ, ಇವರಿಗೆ ತುರ್ತಗಿ ಕಾಮಗಾರಿಯನ್ನು ನಿರ್ವಹಿಸುವಂತೆ ಆದೇಶಿಸಬೇಕಾಗಿಯೇ ಇರಲಿಲ್ಲ.

(ಬಿ) ಮುಂದುವರೆದು ಮೆ॥ ಶಬರಿ ಎಲೆಕ್ಟ್ರಿಕಲ್ಸ್, ಬಣಕಲ್ ಇವರ ಕೂಲಿ ಗುತ್ತಿಗೆ ಕಾಮಗಾರಿಯನ್ನು ರದ್ದುಗೊಳಿಸಿ, ಮೆ॥ ಮಂಜುನಾಥ ಎಲೆಕ್ಟ್ರಿಕಲ್ಸ್ ಚಿಕ್ಕಮಗಳೂರು ಇವರು ದಿನಾಂಕ 31.01.2016 ರಂದೇ ಹೆಚ್ಚುವರಿ ಕಪರಿವರ್ತಕವನ್ನು ಚಾಲನೆಗೊಳಿಸಿರುವುದಾಗಿ, ಏಇಇ ದಿನಾಂಕ 05.02.2016 ರಂದೇ ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ ಇವರ ಗಮನಕ್ಕೆ ತಂದಿದ್ದರೂ ಮೆ// ಶಬರಿ ಎಲೆಕ್ಟ್ರಿಕಲ್ಸ್ ಇವರಗಿ ತುರ್ತಾಗಿ ಕಾಮಗಾರಿಯನ್ನು ನಿರ್ವಹಿಸುವಂತೆ ಆದೇಶಿಸಬೇಕಾಗಿಯೇ ಇರಲಿಲ್ಲ;

(ಸಿ) ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ ಚಿಕ್ಕಮಗಳೂರು ಇವರು ನೀಡಿರುವ ಆದೇಶದ ಎರಡನೆಯ ವಾಕ್ಯವೂ ಸಹ ಸತ್ಯಕ್ಕೆ ದೂರವಾಗಿದೆ. ಕಾರಣ ಈ ಹಿಂದೆ ಇದೇ ಸ.ಕಾನಿ.ಇಂ. (ವಿ), ಮುಡಿಗೆರೆ ಇವರು ಶ್ರೀ ನಾಗೇಶ್ ಗೌಡ ಎಂ.ಎಸ್. ಮಡ್ಡಿಕೆರೆ ಇವರಿಗೆ ನೀಡಿರುವ ಮಾಹಿತಿ ಪತ್ರವನ್ನು ಮತ್ತು ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ ಚಿಕ್ಕಮಗಳೂರು ಇಲ್ಲಿಗೆ ಸಲ್ಲಿಸಿರುವ ಖಂಡಿಕೆವಾರುಯ ಉತ್ತರವನ್ನು ಲಗತ್ತಿಸಿ ಮಾನ್ಯ ನ್ಯಾಯಾಧೀಕರಣಕ್ಕೆ ಸಲ್ಲಿಸುತ್ತಿದ್ದೇವೆ. ಖಂಡಿಕೆವಾರು ಉತ್ತರದಲ್ಲಿ ತಿಳಿಸಿರುವ ಡಿ.ಆರ್.ಐ.ಪಿ. 20 ಹೆಚ್.ಪಿ. ಮೇಲ್ಮನವಿದಾರರು ತಿಳಿಸಿದ ಪರಿವರ್ತಕದ ವ್ಯಾಪ್ತಿಗೆ ಒಳಪಡುವುದಿಲ್ಲ. ಉದ್ದೇಶಪೂರ್ವಕವಾಗಿ ಮತ್ತು ದಾರಿ ತಪ್ಪಿಸಲು ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆಯ ಮುಂದೆ ಸ.ಕಾ.ನಿ.ಇಂ (ವಿ) ಮೂಡಿಗೆರೆ ಇವರು ಹೇಳಿಕೆ

ನೀಡಿದ್ದಾರೆ. ಮುಂದುವರೆದು ಡಿ.ಆರ್.ಐ.ಪಿ. 553-10 ಎಚ್.ಪಿ ಡಿ.ಆರ.ಈ.ಪಿ.1413-10 ಎಚ್.ಪಿ. ಗೆ ಪುನ: ಸಂಪರ್ಕವನ್ನು ಅದೇ ವರ್ಷ ನೀಡಲಾಗಿದೆ. 10 ಎಚ್.ಪಿ. ಹೊರೆ ಸಾರ್ವಜನಿಕ ಕುಡಿಯುವ ನೀರಿನ ಬಳಕೆಗೆ ಇದೆ. ಆದುದರಿಂದ ಸದರಿ ಪರಿವರ್ತಕದ ಮೇಲೆ 45 ಎಚ್.ಪಿ. ಹೊರೆ ಕಡಿಮೆಯಾಗಿರುವ ಬದಲು 50 ಎಚ್.ಪಿ.ಹೊರೆ ಜಾಸ್ತಿಯಾಗಿರುತ್ತದೆ. ಇಷ್ಟೇ ಅಲ್ಲದೆ ಇನ್ನು ಕೆಲವು ಪಂಪ್‌ಸೆಟ್‌ಗಳು ಈ ಪರಿವರ್ತಕದಿಂದ ಸಂಪರ್ಕ ಪಡೆದಿದ್ದು, ಇದನ್ನು ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಯ ಗಮನಕ್ಕೆ ಸ.ಕಾ.ನಿ. ಎಂ(ವಿ) ಮುಡಿಗೆರೆ ಇವರು ತಂದಿರುವುದಿಲ್ಲ. ಈ ಎಲ್ಲಾ ಅಂಶಗನ್ನು ಪರಿಗಣಿಸಿದಾಗ ಸದರಿ ಪರಿವರ್ತಕದ ಮೇಲೆ ಸ.ಕಾ.ನಿ. ಎಂ (ವಿ) ಮುಡಿಗೆರೆ ಇವರು ತಿಳಿಸಿದ ಹಾಗೆ 10 ಎಚ್.ಪಿ + 25 ಕೆವಿ ಹೊರೆಯ ಬದಲು 60 ಎಚ್.ಪಿ + 25 ಕೆವಿ ಹೊರೆ ಬೀಳುತ್ತಿದೆ ಎಂಬುದನ್ನು ಗಣನೆಗೆ ತೆಗೆದುಕೊಳ್ಳಬೇಕು;

(ಡಿ) ಸ.ಕಾನಿ.ಇಂ (ವಿ) ಮುಡಿಗೆರೆ ಇವರು ತಮ್ಮ ಹೇಳಿಕೆಯಲ್ಲಿ ಕೆಲವು ನೀರಾವರಿ ಪಂಪ್‌ಸೆಟ್‌ಗಳ ಸಂಪರ್ಕವನ್ನು ನಿಲುಗಡೆಗೊಳಿಸಲಾಗಿದೆ ಎಂದು ತಿಳಿಸಿರುತ್ತಾರೆ, ಆದರೆ ಯಾವ ದಿನಾಂಕದಂದು ನಿಲುಗಡೆಗೊಳಿಸಲಾಗಿದೆ ಎಂದು ವೇದಿಕೆಯ ಗಮನಕ್ಕೆ ತಂದಿರುವುದಿಲ್ಲ. ದೂರುದಾರರು ಸುಮಾರು 4-5 ವರ್ಷಗಳಿಂದಲೂ ವೋಲ್ಟೇಜ್ ಸಮಸ್ಯೆ ಎದರುರಿಸುತ್ತಿದ್ದರೂ, ಸದರಿ ಪರಿವರ್ತಕದ ಮೇಲೆ ಹೊರೆ ಇಲ್ಲ ಇಂದು ಖಂಡಿಕೆವಾರು ಉತ್ತರದಲ್ಲಿ ತಿಳಿಸಿರುವುದಿನ್ನು ದೂರುದಾರರಾದ ನಾವು ನಿರಾಕರಿಸುತ್ತೇವೆ;

(ಇ) ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ, ಚಿಕ್ಕಮಗಳೂರು, ಇವರು ನೀಡಿದ ಆದೇಶದ ಳನೆಯ ವಾಕ್ಯವನ್ನು ಒಪ್ಪಲು ಸಾಧ್ಯವಿಲ್ಲ. ಕಾರಣ ದಿನಾಂಕ 20.03.2013ರಲ್ಲಿ ಕಾರ್ಯಾದೇಶವಾಗಿದ್ದು ಮತ್ತು ಲೋ ವೋಲ್ಟೇಜ್ ಸಮಸ್ಯೆ ಬಗೆಹರಿಸಿಕೊಡುವಂತೆ ನಾವುಗಳು ದಿನಾಂಕ 16.06.2014 ರಂದು ಅರ್ಜಿ ಸಲ್ಲಿಸಿದ್ದು, ಪರಿವರ್ತಕ ಅಳವಡಿಸಿ, ಲೋ ವೋಲ್ಟೇಜ್ ಸಮಸ್ಯೆ ಬಗೆಹರಿಸಿದ್ದು

ದಿನಾಂಕ 31.01.2016 ರಂದು. ಹೀಗಿರುವಾಗಕ ಇಲಾಖಾ ಅಧಿಕಾರಿಗಳಿಂದ ಕರ್ತವ್ಯ ಲೋಪವಾಗಿದ್ದು ಗ್ರಾಹಕರಿಗೆ ಕೆ.ಇ.ಆರ.ಸಿ. ಲೈಸೆನ್ಸೀಸ್ ಸ್ಟಾಂಡರ್ಡ್ ಫರ್ಮಾರ್ಮೆನ್ಸ್ ರೆಗ್ಯುಲೇಶನ್ಸ್ 2004 ಪ್ರಕಾರ 20.03.2013 ರಿಂದಾಗಲಿ ಕೊನೆ ಪಕ್ಷ 16.06.2014 ರಿಂದಾಗಲೀ ದಿನ ಒಂದಕ್ಕೆ ಕಾಯ್ದೆ ಪ್ರಕಾರ ರೂ.50/– ನೀಡಬೇಕಾಗಿರುತ್ತದೆ. ಆದರೆ ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ ಚಿಕ್ಕಮಗಳೂರು ದೂರುದಾರರು ಕೋರಿರುವ ಪರಿಹಾರವು ಸಮಂಜಸವಾಗಿರುವುದಿಲ್ಲ ಎಂದು ಹೇಳಿರುವುದು ಇಲಾಖಾ ಅಧಿಕಾರಿಗಳನ್ನು ರಕ್ಷಿಸಲೇ ವಿನ: ಕಾಯ್ದೆ ಪ್ರಕಾರ ಇಲ್ಲ, ಇದನ್ನು ನಾವು ಆಕ್ಷೇಪಿಸುತ್ತೇವೆ.

(ಎಫ್) ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ ಚಿಕ್ಕಮಗಳೂರು ಇವರು ನೀಡಿದ ಆದೇಶದ 5ನೆಯ ವಾಕ್ಯವನ್ನು ಒಪ್ಪಲು ಸಾಧ್ಯವಿಲ್ಲ. ಈ ವಿಚಾರವನ್ನು ನಾವು ವಿಚಾರಣೆಯ ವೇಳೆಯಲ್ಲಿ ಸಾಬೀತು ಪಡಿಸುತ್ತೇವೆ. ಕಾರಣ ಪ್ರತಿವಾದಿಗಳಿಗೆ ರಾಮಯ್ಯ ಎಂಬುವವರು ಬರೆದು ಕೊಟ್ಟಿರುತ್ತಾರೆ ಎಂಬ ಪತ್ರವನ್ನು ಅವಲೋಕಿಸಿದಾಗ, 20.11.2015 ರಂದು ರಾಮಯ್ಯ ಎಂಬುವವರು ಸ.ಕಾನಿ.ಎಂ (ವಿ) ಇವರ ಕಛೇರಿಗೆ ಬಂದಿರಲೇ ಇಲ್ಲ, ರಾಮಯ್ಯ ಎಂಬುವವರ ಸಹಿಯನ್ನು ಅವರ ಮಗನಿಂದ ಹಾಕಿಸಲಾಗಿದೆ. ಮುಂದುವರೆದು ಸದರಿ ರಾಮಯ್ಯ ಎಂಬುವವರು ಹರಿಜನರಾಗಿದ್ದು, ಅನಕ್ಷರಸ್ಥರಾಗಿದ್ದು, ಈ ಅಂಶವನ್ನು ದುರ್ಬಳಕೆ ಮಾಡಿ ಬಲಾತ್ಕಾರ ಮಾಡಿ ಇಲಾಖೆಯ ಅಧಿಕಾರಿಗಳೇ ಅವರಿಗೆ ಬೇಕಾದ ಹಾಗೆ ಪತ್ರ ಬರೆದುಕೊಂಡು ರಾಮಯ್ಯ ಇವರ ಮಗನಿಂದ ಸಹಿ ಹಾಕಿಸಿಕೊಳ್ಳಲಾಗಿದೆ ಮತ್ತು ಮನವಿದಾರರಲ್ಲೊಬ್ಬರಾದ ಶ್ರೀ ರಾಮಚಂದ್ರ ಇವರ ಸಾಕ್ಷಿಯನ್ನು ಪಡೆಯಲಾಗಿದೆ. ಈ ವಿಚಾರವನ್ನು ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ ಚಿಕ್ಕಮಗಳೂರು ಇವರ ಮುಂದೆ, ಪ್ರತಿವಾದಿಗಳ ಎದುರಿನಲ್ಲೇ ಹೇಳಿಕೆ ನೀಡಿದ್ದಾಗ್ಯೂ ಸಹ ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ ಚಿಕ್ಕಮಗಳೂರು ಈ ಹೇಳಿಕೆಯನ್ನು ಪರಿಗಣಿಸಿರುವುದಿಲ್ಲ.

(ಜಿ) ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ ಚಿಕ್ಕಮಗಳೂರು ಇವರ ಮುಂದೆ ಪ್ರತಿವಾದಿಗಳು ನೀಡಿದ ಅಂಶಗಳನ್ನು ಗಮನಿಸಿದಾಗ : ೧) ಸ.ಕಾ.ನಿ. ಎಂ. (ವಿ) ಮೂಡಿಗೆರೆ ಇವರು ಸಾರ್ವಜನಿಕರ ಮೇಲಿನ ಕರುಣೆಯಿಂದ ೨೫ ಕೆವಿಎ ಪರಿವರ್ತಕ ಅಳವಡಿಸುತ್ತಿರುವುದಾಗಿ ತಿಳಿಸಿರುತ್ತಾರೆ. ಇದನ್ನು ನಾವು ಒಪ್ಪಲು ಸಾಧ್ಯವಿಲ್ಲ. ಕಾರಣ ಈ ಬಗ್ಗೆ ಸ್ಪಷ್ಟೀಕರಣವನ್ನು (೩) ನೆ ಅಕ್ಷೇಪಣೆಯಲ್ಲಿ ನೀಡಲಾಗಿದೆ. (೨) ರಾಮಯ್ಯ ಮತ್ತು ರಾಮಚಂದ್ರ ಇವರು ಯಾವುದೇ ಸಮಸ್ಯೆ ಇಲ್ಲ ಎಂದು ಪತ್ರ ನೀಡಿರುವುದನ್ನು ನಾವುಗಳು ಒಪ್ಪಲು ಸಾಧ್ಯವಿಲ್ಲ. ಈ ಬಗ್ಗೆ ಸ್ಪಷ್ಟೀಕರಣವನ್ನು ಅಕ್ಷೇಪಣೆ (೫) ರಲ್ಲಿ ನೀಡಲಾಗಿದೆ. (೩) ಕಾಮಗಾರಿ ಮಂಜೂರಾಗಿದ್ದು 20.03.2013 ರಲ್ಲಿ, ಗುತ್ತಿಗೆದಾರರು ಪರಿವರ್ತಕ ಅಳವಡಿಸಿರುವುದು 28.01.2016 ರಲ್ಲಿ. ಹೀಗಿರುವಾಗ ಗುತ್ತಿಗೆದಾರರು ನೀಡಿರುವ ಕಾರಣವನ್ನು ಒಪ್ಪಲು ಸಾಧ್ಯವಿಲ್ಲ. ಕೇವಲ ಒಂದು ವಾರದಲ್ಲಿ ಈ ಕಾಮಗಾರಿಯನ್ನು ಮುಕ್ತಾಯಗೊಳಿಸಲಾಗಿದೆ. ಅಂದ ಮೇಲೆ ಮಳೆಗಾಲ ಆರಂಭವಾಗುವುದು ಜೂನ್ ತಿಂಗಳ ನಂತರ. ಗದ್ದೆಯ ಬೇಸಾಯ ಆರಂಭವಾಗುವುದು ಜೂನ್ ನಂತರ. ಹೀಗಿರುವಾಗ 20.03.2013 ರಿಂದ 3 ತಿಂಗಳೊಳಗೆ ಪರಿವರ್ತಕ ಅಳವಡಿಸಬಹುದಿತ್ತು. ಈ ಕಾಮಗಾರಿಯನ್ನು ಮಾಡದೆ 3 ವರ್ಷದ ಬಳಿಕ ಗುತ್ತಿಗೆದಾರರು ಈಗ ಗದ್ದೆಯಲ್ಲಿ ಪೈರು ಬಂದಿದ್ದು, ಕಾಮಗಾರಿಯನ್ನು ಪೂರ್ಣಗೊಳಿಸಲು ಕಷ್ಟವಾಗಿದೆ ಎಂದು ಎಇಇ (ವಿ) ಹೇಳಿರುವುದನ್ನು ನಾವು ಅಕ್ಷೇಪಿಸುತ್ತೇವೆ. ಮುಂದುವರೆದು ಗುತ್ತಿಗೆದಾರನ ನಿರ್ಲಕ್ಷದಿಂದ ಉಂಟಾದ ಸಮಸ್ಯೆಗೆ ಇಲಾಖೆಯೇ ಜವಾಬ್ದಾರಿ ವಿನ: ಗ್ರಾಹಕನಲ್ಲ. ಮುಂದುವರೆದು ಸ.ಕಾನಿ.ಇಂ (ವಿ) ಮುಡಿಗೆರೆ ಇವರು 2015ರಲ್ಲಿ ಬಂದಂತಹ ಭಾರೀ ಮಳೆಯಿಂದ ಕಾಮಗಾರಿ ಮಾಡಲು ವಿಳಂಬವಾಗಿದೆ ಎಂದು ತಿಳಿಸಿರುವುದನ್ನೂ ಸಹ ನಿಕಾರಿಸುತ್ತೇವೆ;

(ಹೆಚ್) ಮುಂದುವರೆದು ರಾಮಚಂದ್ರ ಇವರ ಹೇಳಿಕೆಗೆ ಸ.ಕಾ.ನಿ.ಇಂ (ವಿ) ಮೂಡಿಗೆರೆ ಇವರು ನೀಡಿರುವ ಪ್ರತ್ಯುತ್ತರವನ್ನೂ ಸಹ ನಾವು ನಿರಾಕರಿಸುತ್ತೇವೆ.

(ಐ) ಸ.ಕಾ.ನಿ.ಇ (ವಿ) ಮೂಡಿಗೆರೆ ಖಂಡಿಕೆವಾರು ಉತ್ತರದ ಪತ್ರ ದಿನಾಂಕ 24.11.2015ರ ಖಂಡಿಕೆ 4 ರಲ್ಲಿ ಲೋವೋಲ್ಟೇಜ್ ಸಮಸ್ಯೆ ಇರುವುದನನ್ನು ಒಪ್ಪಿಕೊಂಡಿದ್ದು, ನಿಯಮಾನುಸಾರ ಗುಣಮಟ್ಟದ ವೋಲ್ಟೇಜ್ ನೀಡಲು ಸಾಧ್ಯವಾಗುತ್ತಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ;

(ಜೆ) ಸ.ಕಾ.ನಿ. ಇಂ (ವಿ) ಮುಡಿಗೆರೆ ಇವರು ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ ಚಿಕ್ಕಮಗಳೂರು ಇವರಿಗೆ ನೀಡಿದ ಖಂಡಿಕೆವಾರು ಉತ್ತರದ ಪತ್ರ ದಿನಾಂಕ 24.11.2015 ರ ಖಂಡಿಕೆ 4 ರಲ್ಲಿ ಲೋವೋಲ್ಟೇಜ್ ಸಮಸ್ಯೆ ಇರುವುದನ್ನು ಒಪ್ಪಿಕೊಂಡಿದ್ದು, ನಿಯಮಾನುಸಾರ ಗುಣಮಟ್ಟದ ವೋಲ್ಟೇಜ್ ನೀಡಲು ಸಾಧ್ಯವಾಗುತ್ತಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ.

(ಕೆ) ಸ.ಕಾ.ನಿ. ಇಂ (ವಿ) ಮೂಡಿಗೆರೆ ಇವರು ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ ಚಿಕ್ಕಮಗಳೂರು ಇವರಿಗೆ ನಿಡಿದ ಖಂಡಿಕೆವಾರು ಉತ್ತರದ ಪತ್ರ ದಿನಾಂಕ 24.11.2015ರ ಖಂಡಿಕೆ 5 ರಲ್ಲಿ ಕುಡಿಯುವ ನೀರಿನ ಸ್ಥಾವರವಿದ್ದು, ಇದಕ್ಕೆ ಯಾವುದೇ ದೂರು ಬಂದಿಲ್ಲ ಎಂದು ಬೇಜವಾಬ್ದಾರಿಯುತವಾಗಿ ತಿಳಿಸಿರುವುದನ್ನು ನಾವು ನಿರಾಕರಿಸುತ್ತೇವೆ. ಕಾರಣ ಈ ಬಗ್ಗೆ ನಮ್ಮ ಗ್ರಾಮ ಪಂಚಾಯ್ತಿಯಿಂದ ಸದರಿ ವಿದ್ಯುತ್ ಅಧಿಕಾರಿಗಳಿಗೆ ಬರೆದ ಪತ್ರದ ಪ್ರತಿಯನ್ನೂ ಮಾನ್ಯ ನ್ಯಾಯಾಧಿಕರಣದ ಗಮನಕ್ಕೆ ತರುತ್ತಿದ್ದೇವೆ.

(ಎಲ್) ಸ.ಕಾ.ನಿ. ಇಂ (ವಿ) ಇವರು ವೇದಿಕೆಗೆ ಕುಂದುಕೊರತೆಗಳ ನಿವಾರಣಾ ವೇದಿಕೆರವರು ನೀಡಿದ ಖಂಡಿಕೆವಾರು ದಿನಾಂಕ 24.11.2015ರ ಉತ್ತರದ ಪತ್ರದ ಖಂಡಿಕೆ 5ರಲ್ಲಿ ನೀರಾವರಿ ಪಂಪ್‌ಸೆಟ್ ಗ್ರಾಹಕರು ಅವರ ಬಾಕಿಯನ್ನು ಕಟ್ಟಲು ಬದ್ದರಾಗಬೇಕು ಎಂದು ತಿಳಿಸಿರುವುದನ್ನು ನಾವು ಆಕ್ಷೇಪಿಸುತ್ತೇವೆ. ಕಾರಣ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವುದಕ್ಕೆ ಮೆಸ್ಕಾಂ ಬದ್ದರಾಗಿದ್ದಲ್ಲಿ ಪಂಪ್‌ಸೆಟ್ ಗ್ರಾಹಕರು ಬಾಕಿಯನ್ನು ಕಟ್ಟಲು ಬದ್ಧರಾಗಿರುತ್ತಾರೆ. ಆದಾಗ್ಯೂ ಸಹ ರೈತರು ಅವರ ಸಮಸ್ಯೆಯ ಜೊತೆಗೂ ಸಹ ಸ್ವಲ್ಪ ಹಿಂದೆ ಮುಂದೆ ಬಾಕಿಯನ್ನು

ಬಡ್ಡಿ ಸಹಿತ ಕಟ್ಟಿರುತ್ತಾರೆಯೆ ವಿನ: ಬಾಕಿ ಉಳಿಸಿಕೊಂಡಿಲ್ಲ. ಮುಂದುವರೆದು ಯಾವುದೇ ವ್ಯಕ್ತಿಯಾಗಲೀ/ಮೆಸ್ಕಾಂ ಆಗಲೀ ಅವರ ಹಕ್ಕನ್ನು ಪ್ರತಿಪಾದಿಸುವ ಜೊತೆಗೆ ಅವರ ಕರ್ತವ್ಯವನ್ನೂ ಸಹ ಪಾಲಿಸಲು ಬದ್ಧರಾಗಿರಬೇಕು. ಮೆಸ್ಕಾಂ ಲೋ ವೋಲ್ಟೇಜ್ ಸಮಸ್ಯೆಯಿಂದ ಪಂಪ್‌ಸೆಟ್ ಗ್ರಾಹಕರ ಪಂಪ್‌ಸೆಟ್ ಸುಟ್ಟುಹೋಗುತ್ತಿದೆ. ಇದಕ್ಕೆ ಯಾರು ಜವಾಬ್ದಾರರು?

4. ಪ್ರತಿವಾದಿಗಳಾದ ಸಹಾಯಕ ನಿರ್ವಾಹಕ ಇಂಜಿನಿಯರ್ ತಮ್ಮ ಪತ್ರ ದಿನಾಂಕ 03.01.2017 ರಲ್ಲಿ ಉತ್ತರವನ್ನು ಕೆಳಕಂಡಂತೆ ಕಳುಹಿಸಿದ್ದಾರೆ.

(೧) ಮುಡಿಗೆರೆ ಉಪ–ವಿಭಾಗದ ವ್ಯಾಪ್ತಿಗೆ ಬರುವ ಮುಡಿಗೆರೆ ಶಾಖೆಯಲ್ಲಿ ಬರುವ ಮಡ್ಡಿಕೆರೆ ಗ್ರಾಮಕ್ಕೆ 11ಕೆವಿ ದಾರದಹಳ್ಳಿ ವಿದ್ಯುತ್ ಮಾರ್ಗದಲ್ಲಿ ಮಡ್ಡಿಕೆರೆ 63 ಕೆವಿಎ ಪರಿವರ್ತಕದಿಂದ ವಿದ್ಯುತ್ ಸರಬರಾಜು ಮಾಡಲಾಗುತ್ತಿದ್ದು, ಹಾಲಿ ಪರಿವರ್ತಕದ ಮೇಲೆ 45 ಹೆಚ್.ಪಿ ಐ.ಪಿ.ಸ್ಥಾವರ, 10 ಹೆಚ್.ಪಿ ಸ್ಥಾವರ, 10 ಹೆಚ್.ಪಿ ಕುಡಿಯುವ ನೀರಿನ ಸ್ಥಾವರ ಹಾಗೂ ಸುಮಾರು 25 ಕಿ.ವ್ಯಾ ಗೃಹ ಬಳಕೆ ವಿದ್ಯುತ್ ಸ್ಥಾವರದ ಹೊರೆ ಇದ್ದುದರಿಂದ ಹಾಗೂ ಹಾಲಿ ಪರಿವರ್ತಕದ ಎಲ್.ಟಿ.ಮಾರ್ಗಉು ಗುಡ್ಡಗಾಡು ಮತ್ತು ಗದ್ದೆ ತೋಟಗಳ ಮಧ್ಯದಲ್ಲಿ ಹಾದು ಹೋಗಿದ್ದರಿಂದ ಮತ್ತು ಹಾಲಿ ಮಡ್ಡಿಕೆರೆ 63 ಕೆವಿಎ ಪರಿವರ್ತಕದ ಮೇಲೆ ವಿದ್ಯುತ್ ಹೊರೆಯನ್ನು ಕಡಿಮೆ ಮಾಡಲು ಮಡ್ಡಿಕೆರೆ ಗ್ರಾಮದಲ್ಲಿ ಹೆಚ್ಚುವರಿ 25 ಕೆವಿಎ ಪರಿವರ್ತಕ ಅಳವಡಿಸಲು ಅಂದಾಜು ಪಟ್ಟಿ ತಯಾರಿಸಿ ದಿನಾಂಕ 20.03.2013 ರಂದು ಕಾರ್ಯದೇಶ ವಿಭಾಗೀಯ ಕಛೇರಿಯಿಂದ ಮಂಜೂರಾತಿ ದೊರೆತಿರುತ್ತದೆ. ಈ ಕಾಮಗಾರಿಯನ್ನು ನಿರ್ವಹಿಸಲು ವಿದ್ಯುತ್ ಗುತ್ತಿಗೆದಾರರಾದ ಶ್ರೀ ಶಿವಮೂರ್ತಿ ಮೆ// ಶಬರಿ ಎಲೆಕ್ಟ್ರಿಕಲ್ಸ್ ಬಣಕಲ್ ರವರು ಕಾಮಗಾರಿಯನ್ನು ನಿರ್ವಹಿಸಲು ಒಪ್ಪಿಕೊಂಡಿರುತ್ತಾರೆ. ವಿಭಾಗೀಯ ಕಛೇರಿಯಿಂದ ಕೂಲಿಗುತ್ತಿಗೆ ಅವಾರ್ಡ್‌ನ್ನು ಸಹ ನೀಡಲಾಗಿರುತ್ತದೆ ಹಾಗೂ ಈ ಕಾಮಗಾರಿಯನ್ನು ನಿರ್ವಹಿಸಲು ಬೇಕಾದ ಎಲ್ಲಾ ಪ್ರಮುಖ ಸಾಮಗ್ರಿಗಳನ್ನು ದಿನಾಂಕ 17.09.2014 ರಂದೇ ಉಗ್ರಾಣದಿಂದ ಪಡೆದು ಗುತ್ತಿಗೆದಾರರಾದ ಶ್ರೀ ಶಿವಮೂರ್ತಿರವರಿಗೆ ನೀಡಲಾಗಿರುತ್ತದೆ.

ಆದಾಗ್ಯೂ ಸಹ ಗುತ್ತಿಗೆದಾರರು ಈ ಕಾಮಗಾರಿಕೆಯನ್ನು ನಿರ್ವಹಿಸಿರುವುದಿಲ್ಲ ಮತ್ತು ಈ ಬಗ್ಗೆ ಗುತ್ತಿಗೆದಾರರಿಗೆ ಅನೇಕ ಬಾರಿ ಮೌಖಿಕವಾಗಿ ಹಾಗೂ ಪತ್ರ ಮುಖೇನ ತಿಳಿಸಲಾಗಿದ್ದರೂ ಕೂಡ ಗುತ್ತಿಗೆದಾರರು ಈ ಕಾಮಗಾರಿಯನ್ನು ನಿರ್ವಹಿಸಿರುವುದಿಲ್ಲ. ಈ ಬಗ್ಗೆ ಗುತ್ತಿಗೆದಾರರಿಗೆ ಸಹಾಯುಕ ಇಂಜಿನಿಯರ್ (ವಿ), ಮೆಸ್ಕಾಂ, ಮುಡಿಗೆರೆ ಕಾಮಗಾರಿಯನ್ನು ತಕ್ಷಣ ನಿರ್ವಹಿಸಲು ಸೂಚಿಸಿ ನೋಟಿಸ್‌ಗಳನ್ನು ನೀಡಿರುತ್ತಾರೆ. ಈ ಹಿನ್ನಲೆಯಲ್ಲಿ ಗುತ್ತಿಗೆದಾರರು ಬೇರೆ ಕಾಮಗಾರಿಗಳನ್ನು ನಿರ್ವಹಿಸುವ ಒತ್ತಡವಿದ್ದುದರಿಂದ ಕಳೆದ 2013-14 ರಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸಾದ್ಯವಾಗಿಲ್ಲವೆಂದು ಹಾಗೂ 2015 ನೇ ಸಾಲಿನಲ್ಲಿ ಕಾಮಗಾರಿಯನ್ನು ತೆಗೆದುಕೊಳ್ಳುವ ಸಮಯದಲ್ಲಿ ಅಲ್ಲಿನ ಸ್ಥಳೀಯ ರೈತರು ಗದ್ದೆಗಳಲ್ಲಿ ಪೈರು ಬಂದಿದ್ದು, ಕಾಮಗಾರಿಯನ್ನು ಪೂರ್ಣಗೊಳಿಸಲು ಕಷ್ಟವಾದುದ್ದರಿಂದ 02 ತಿಂಗಳ ಕಾಲಾವಕಾಶ ಕೋರಿ ಪತ್ರ ಬರೆದಿರುತ್ತಾರೆ. ಈ ಮದ್ಯೆ ಗ್ರಾಹಕರು ಮೆಸ್ಕಾಂ ಕುಂದುಕೊರತೆ ನಿವಾರಣಾ ವೇದಿಕೆ ವೃತ್ತ ಕಛೇರಿ ಚಿಕ್ಕಮಗಳೂರಿನಲ್ಲಿ ದಿನಾಂಕ 02.11.2015 ರಲ್ಲಿ ದೂರು ದಾಖಲಿಸಿ ದಿನವಿಂದಕ್ಕೆ ರೂ.50/- (ಲೈಸೆನ್ಸುದಾರರ ಕಾರ್ಯಾಧಾರಿತ ಗುಣಮಟ್ಟಗಳು) (Licensees Standard of Performance) ನಿಯಮಗಳಂತೆ ಪರಿಹಾರ ಕೋರಿರುತ್ತಾರೆ;

(೨)ಈ ಹಿನ್ನಲೆಯಲ್ಲಿ ಸದರಿ ಹೆಚ್ಚುವರಿ 25 ಕೆವಿಎ ಪರಿವರ್ತಕ ಅಲವಡಿಸುವ ಕಾಮಗಾರಿಯನ್ನು ಕೂಲಿಗುತ್ತಿಗೆದಾರರು ನಿರ್ವಹಿಸಲು ವಿಳಂಬ ಮಾಡಿದ್ದರಿಂದ ಇವರ ಅವಾರ್ಡ್‌ನ್ನು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮೆಸ್ಕಾಂ, ಚಿಕ್ಕಮಗಳೂರು ರವರು ದಿನಾಂಕ 20.01.2016 ಪತ್ರದಲ್ಲಿ ರದ್ದು ಪಡಿಸಿ ಸದರಿ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಗ್ರಾಹಕರ ಹಿತದೃಷ್ಟಿಯಿಂದ ಈ ಕಾಮಗಾರಿಯನ್ನು ಮಂಜುನಾಥ ಎಲೆಕ್ಟ್ರಿಕಲ್ಸ್ ರವರಿಗೆ ವಹಿಸಿದ್ದು, ಅವರು ಕಾಮಗಾರಿಯನ್ನು ದಿನಾಂಕ 27.01.2016 ರಂದು ಪೂರ್ಣಗೊಳಿಸಿ, ದಿನಾಂಕ 31.01.2016 ರಂದು ಚಾಲನೆಗೊಳಿಸಲಾಗಿದೆ;

(ಇ)ಸದರಿ ವಿಚಾರದಲ್ಲಿ ದೂರುದಾರರು ದಿನಾಂಕ 02.11.2015 ರಂದು ಮೆಸ್ಕಾಂ ಕುಂದು ಕೊರತೆ ನಿವಾರಣಾ ವೇದಿಕೆ ವೃತ್ತ ಕಛೇರಿ, ಚಿಕ್ಕಮಗಳೂರಿನಲ್ಲಿ ನೀಡಿದ ದೂರಿನ ಅನ್ವಯ ವಿಚಾರಣೆಯಾಗಿ ಆದೇಶ ದಿನಾಂಕ 31.03.2016 ರಲ್ಲಿ ತೀರ್ಪು ನೀಡಿದ್ದು, ಆ ಪ್ರಕಾರ ಆ ಪ್ರಕಾರ ಹೆಚ್ಚುವರಿ 25 ಕೆವಿಎ ಪರಿವರ್ತಕ ಅಳವಡಿಸಿ ಹೆಚ್ಚುವರಿ ಸೇವೆ ಹಾಗು ವೋಲ್ಟೇಜ್ ನೀಡಲು ವ್ಯವಸ್ಥೆಯಾಗಿದೆ. ಈ ಹಿಂದೆ ಇದ್ದ 63 ಕೆವಿಎ ಪರಿವರ್ತಕ ಮೇಲಿದ್ದ 45 ಹೆಚ್.ಪಿ ನೀರಾವರಿ ಪಂಪ್‌ಸೆಟ್‌ಗಳಿಗೆ ಸಂಬಂಧಿಸಿದಂತೆ ಗ್ರಾಹಕರು ರೂ.6.07 ಲಕ್ಷ ಬಾಕಿ ಪಾವತಿಸದೇ ಇರುವುದರಿಮದ ವಿದ್ಯುತ್ ನಿಲುಗಡೆ ಮಾಡಿದ್ದು ದುರುದಾರರು ತಿಳಿಸಿದಂತೆ ಲೋ ವೋಲ್ಟೇಜ್ ಸಮಸ್ಯೆ ಉದ್ಭವಿಸುವುದಿಲ್ಲ, ಈ ಬಗ್ಗೆ ದೂರುದಾರರಲ್ಲಿ ಒಬ್ಬರಾದ ಶ್ರೀ ರಾಮಯ್ಯ ನವರು ದಿನಾಂಕ 20.11.2015 ರಲ್ಲಿ ನೀಡಿದ ಪತ್ರದಲ್ಲಿ ತಿಳಿಸಿದ್ದಾರೆ. ಮೂಡಿಗೆರೆ 66/11 ಕೆವಿ ವಿದ್ಯುತ್ ವಿತರಣಾ ಕೇಂದ್ರದಿಂದ ಈ ಪ್ರಾಂತ್ಯಕ್ಕೆ ವಿದ್ಯುತ್ ಸರಬರಾಜುಗತ್ತಿದ್ದು ಮುಖ್ಯ ಜಾಲದಲ್ಲಿ ಏರುಪೇರಾದಾಗ ಕೆಲವೊಂದು ಬಾರಿ ವೋಲ್ಟೇಜ್ ಏರಿಳಿತವಾದಾಗ ವೋಲ್ಟೇಜ್ ಸಮಸ್ಯೆ ಕಂಡು ಬರುತ್ತದೆ. ಇದೇ ಕಾರಣವನ್ನು ಮುಂದಿಟ್ಟು ದೂರುದಾರರು ಪರಿಹಾರ ಕೇಳುವುದು ಸಮಂಜಸವಲ್ಲ ಈ ಬಗ್ಗೆ ಆದೇಶದಲ್ಲೇ ಪ್ರಸ್ತಾಪವಾಗಿದೆ. ವೇದಿಕೆಗೆ ದೂರು ನೀಡಿರುವಂತಹ ಶ್ರೀ ರಾಮಚಂದ್ರ, ಎಸ್.ಸಿ., ಶ್ರೀ ಜಗದೀಶ, ಶ್ರೀ ರಮೇಶ ಹಾಗೂ ಶ್ರೀಮತಿ ರೂಪ ಇವರುಗಳು ನೊಂದಾಯಿತ ಗ್ರಾಹಕರಾಗಿರುವುದಿಲ್ಲ;

(ಛ)ಇನ್ನು ದೂರುದಾರರು ತಿಳಿಸಿದಂತೆ ಅರ್ಜಿಯಲ್ಲಿ ತಿದ್ದುಪಡಿ ಮಾಡಿಲ್ಲವೆಂದು ಅಧೀಕ್ಷಕ ಇಂಜಿನಿಯರ್ (ವಿ) ವೃತ್ತ ಕಛೇರಿ, ಮೆಸ್ಕಾಂ, ಚಿಕ್ಕಮಗಳೂರು ರವರು ಪತ್ರ ದಿನಾಂಕ 23.11.2016 ರಲ್ಲಿ ಸ್ಪಷ್ಟಪಡಿಸಿರುತ್ತಾರೆ.

(ಜ)ವೇದಿಕೆಗೆ ದೂರು ನೀಡಿರುವಂತಹ ಶ್ರೀ ರಾಮಚಂದ್ರ ಎಸ್.ಸಿ, ಶ್ರೀ ಜಗದೀಶ, ಶ್ರೀ ರಮೇಶ ಹಾಗೂ ಶ್ರೀಮತಿ ರೂಪ ಇವರುಗಳು ನೊಂದಾಯಿತ ಗ್ರಾಹಕರಾಗಿರುವುದಿಲ್ಲ, ಈ ವಿಚಾರದಲ್ಲಿ ಉದ್ದೇಶ ಪೂರ್ವಕವಾಗಿ ಕಂಪನಿಯ ಘನತೆಯನ್ನು ಕುಂದಿಸಲು ಪ್ರತಿನಿಧಿಯಾಗಿ ನಾಮ ನಿರ್ದೇಶನಗೊಂಡಿರುವ ಶ್ರೀ ಎಂ.ಎಸ್.ನಾಗೇಶ್ ಗೌಡ, ಮಡ್ಡಿಕೆರೆ, ಬೆಳ್ಳೂರು ಅಂಚೆ, ಮೂಡಿಗೆರೆ ರವರು ಪ್ರಯತ್ನಿಸುತ್ತಿರುವುದು ಕಂಡು ಬಂದಿದೆ.

(ಒ)ಏಕೆಂದರೆ ದೂರುದಾರರ ಪ್ರತಿನಿಧಿಯಾಗಿರುವ ಶ್ರೀ ನಾಗೇಶ್‌ಗೌಡ ಒಂದು 5 ಅ.ಶ. ನೀರಾವರಿ ಪಂಪ್‌ಸೆಟ್ ವಿದ್ಯುತ್ ದುರುಪಯೋಗ ಮಾಡುತ್ತಿದ್ದಾರೆಂಬ ಕಾರಣಕ್ಕೆ ಜಾಗೃತದಳದಿಂದ ಪ್ರಕರಣ ಸಂಖ್ಯೆ ಎನ.ಸಿ. 51 ದಿನಾಂಕ 07.04.2013ರಲ್ಲಿ ದಾಖಲಾಗಿದ್ದು ಈ ವಿಚಾರದಲ್ಲಿ ಬ್ಯಾಕ್ ಬಿಲ್ ರೂ.83,167/- ದಂಡ ವಿಧಿಸಿದ್ದು, ಈ ಬಗ್ಗೆ ಚಿಕ್ಕಮಗಳೂರಿನ ಜಿಲ್ಲಾ ಗ್ರಾಹಕರ ವೇದಿಕೆಯಲ್ಲಿ ದೂರು ದಾಖಲಾಗಿ ವಿಚಾರಣೆಯಾಗಿ ಮೆಸ್ಕಾಂ ಪರವಾಗಿ ಆದೇಶವಾಗಿರುವುದು ದಿನಾಂಕ 23.05.2017ರ ಪತ್ರದಲ್ಲಿ ತಿಳಿಸಿದ್ದಾರೆ. ಈ ನೀರಾವರಿ ಪಂಪ್‌ಸೆಟ್ ಅನ್ನು ಬ್ಯಾಕ್‌ಬಿಲ್ ಬಾಕಿ ಕಟ್ಟಿಲ್ಲದ ಕಾರಣ ವಿದ್ಯುತ್ ನಿಲುಗಡೆ ಮಾಡಿರುವ ಈ ರೀತಿಯಾಗಿ ದೂರುಗಳ್ಳು ಮುಂದುವರಿಸುತ್ತಿದ್ದಾರೆ. ಈಗಲೂ ಇವರ ಬಾಕಿ ರೂ.1,09,803.00 ಆಗಿದ್ದು ಕಂಪನಿಗೆ ಸುಸ್ತಿದಾರರಾಗಿದ್ದಾರೆ ಹಾಗೂ ದೂರುದಾರರಾದ ಶ್ರೀ ರಾಮಯ್ಯ ರವರು ತಿಳಿಸಿರುವ ಮನೆ ಬಳಕೆ ಸ್ಥಾವರ ಡಿ.ಆರ.ಎ.ಪಿ–19666 (ಎಲ್.ಟಿ – 2) ಗಳಲ್ಲಿ ಅಂದಿನ ದಿನಗಳಲ್ಲಿ ರೂ.4,694.00 ಬಾಕಿ ಪಾವತಿಸದೇ ಸುಸ್ತಿದಾರರಾಗಿರುತ್ತಾರೆ.

5. ಮೇಲ್ಮನವಿದಾರರು ಸ.ಕಾ.ಇ. ರವರ ಉತ್ತರಕ್ಕೆ ಈ ಕೆಳಕಂಡಂತೆ ದಿನಾಂಕ 16.03.2017 ಪತ್ರದಲ್ಲಿ ಪ್ರತ್ಯುತ್ತರ ಈ ಕೆಳಕಂಡಂತೆ ನೀಡಿದ್ದಾರೆ.

(ಎ) ಎ.ಇ.ಇ. ರಾಜಶೇಖರ್‌ರವರು ಹೇಳಿರುವಂತೆ ಮೆಸ್ಕಾಂ ಕುಂದುಕೊರತೆ ನಿವಾರಣಾ ವೇದಿಕೆ ಆದೇಶ ಸಂಖ್ಯೆ : 8865-68 ದಿನಾಂಕ 31.03.2016 ರಲ್ಲಿ ತೀರ್ಪು ನೀಡಿದ್ದು, ಆ ಪ್ರಕಾರ ಹೆಚ್ಚುವರಿ 25 ಕೆ.ವಿ.ಎ ಪರಿವರ್ತಕ ಅಳವಡಿ ವೋಲ್ಟೇಜ್ ನೀಡಲು ವ್ಯವಸ್ಥೆಯಾಗಿದೆ ಎಂದು ಹೇಳಿ ಖಂಡಿಕೆವಾರು ಉತ್ತರದ ಪ್ಯಾರಾ 5 ರಲ್ಲಿ ಮೆ: ಮಂಜುನಾಥ ಎಲೆಕ್ಟ್ರಿಕಲ್ಸ್, ಚಿಕ್ಕಮಗಳೂರು 20.01.2016 ರಂದು ಕಾಮಗಾರಿ ಪ್ರಾರಂಭಿಸಿ ದಿನಾಂಕ 27.01.2016 ರಂದು ಪೂರ್ಣಗೊಳಿಸಿ 31.01.2016 ರಂದು ಚಾಲನೆಗೊಳಿಸಲಾಗಿದೆ ಎಂಬ ಅಂಶವನ್ನು ಗಮನಿಸಬೇಕು. ಹಾಗಾಗಿ ಈ ಆದೇಶದಂತೆ ಬಗೆಹರಿಸಲಾಗಿದೆ ಎಂಬುದು ಸುಳ್ಳು.

(ಬಿ) ಮುಂದುವರಿದು ಇನ್ನೂ ಈ ಹಿಂದೆ 63 ಕೆ.ವಿ.ವಿ. ಪರಿವರ್ತಕ 45 ಹೆಚ್.ಪಿ ನೀರಾವರಿ ಪಂಪುಸೆಟ್ಟುಗಳನ್ನು ಗ್ರಾಹಕರು 6.07 ಲಕ್ಷ ಬಾಕಿ ಪಾವತಿಸದೇ ಇರುವುದರಿಂದ ವಿದ್ಯುತ್ ನಿಲುಗಡೆ ಮಾಡಿದ್ದರಿಂದ ದೂರುದಾರರು ತಿಳಿಸಿದಂತೆ ಲೋ ವೋಲ್ಟೇಜ್ ಸಮಸ್ಯೆ ಉದ್ಭವಿಸುವುದಿಲ್ಲ ಎಂದು ತಿಳಿಸಿರುತ್ತಾರೆ. ಆದರೆ ಬಾಕಿ ಪಾವತಿಸದೇ ಇದ್ದುದಕ್ಕೆ ಯಾವಾಗ ಸಂಪರ್ಕ ಕಡಿತಗೊಳಿಸಲಾಯಿತು ಮತ್ತು ಬಾಕಿ ಪಾವತಿಸಿದ ನಂತರ ಯಾವಾಗ ಮರು ಸಂಪರ್ಕ ನೀಡಲಾಯಿತು ಎಂದು ಮಾಹಿತಿ ನೀಡಿ ಎಂದು ಕೇಳಿದರೂ ಇದುವರೆಗೆ ನೀಡಿರುವುದಿಲ್ಲ. ಅದನ್ನು ತಾವು ತರಿಸಿಕೊಳ್ಳಬೇಕಾಗಿ ವಿನಂತಿ. ಹಾಗೆ ಇದೇ 63 ಕೆ.ವಿ.ಎ ಪರಿವರ್ತಕಕ್ಕೆ ಸೇರಿದ ಸ್ಥಾವರಗಳ ವಿವರವನ್ನು ಸಹ ನೀಡದೇ ಆಯೋಗವನ್ನು ವಂಚಿಸಿರುತ್ತಾರೆ. 63 ಕೆ.ವಿ ಈ ಪರಿವರ್ತಕದಡಿಯಲ್ಲಿ ಹೆಚ್ಚುವರಿ 25 ಕೆ.ವಿ ಪರಿವರ್ತಕವನ್ನು ಅಳವಡಿಸುವ ಮೊದಲು ಒಟ್ಟು ಎಂ.ಕೆ.ಗುರುವಪ್ಪಗೌಡ 10 + 5 ಹೆಚ್.ಪಿ ಕುಡಿಯುವ ನೀರಿನ ಸ್ಥಾವರ 5 + 5 ಎಂ.ಎಸ್.ರಮೇಶ್‌ಗೌಡ 7.5 ಹೆಚ್.ಪಿ. ಎಂ.ಕೆ.ಉಪೇಂದ್ರ 10 ಹೆಚ್.ಪಿ, ಹೆಚ್.ಎಂ.ಪ್ರದೀಪ್ 7.5 ಹೆಚ್.ಪಿ, ಎಂ.ವಿ.ನಂಜುಂಡೇಗೌಡ 10 ಹೆಚ್.ಪಿ., ಎ.ಕೆ.ಹರೀಶ್ 10 ಹೆಚ್.ಪಿ. ಎಂ.ಆರ್. ಲಕ್ಷ್ಮಣಗೌಡ 10 ಹೆಚ.ಪಿ.ಎಂ.ಎಸ್.ನಾಗೇಶ್‌ಗೌಡ 5 ಹೆಚ್.ಪಿ. + ಗೃಹಬಳಕೆಗೆ ಇಷ್ಟಿದ್ದರೂ ಸಹ ಆಯೋಗದ ಗಮನಕ್ಕೆ ತಾರದೇ ಬರೀ 10 ಹೆಚ್.ಪಿ ಗೃಹಬಳಕೆ ವಿದ್ಯುತ್ ಮಾತ್ರ ಇರುವುದೆಂದು ತಪ್ಪು ಮಾಹಿತಿ ನೀಡಿ ಆಯೋಗವನ್ನು ದಾರಿ ತಪ್ಪಿಸುವ ಗೃಹಬಳಕೆ ವಿದ್ಯುತ್ ಮಾತ್ರ ಇರುವುದೆಂದು ತಪ್ಪು ಮಾಹಿತಿ ಆಯೋಗವನ್ನು ದಾರಿ ತಪ್ಪಿಸುವ ಪ್ರಯತ್ನ ಮಾಡಿರುವುದನ್ನು ಪರಿಗಣಿಸಬೇಕಾಗಿದೆ.

(ಸಿ) ಇನ್ನು ಪ್ಯಾರ 7ಕ್ಕೆ ಸಂಬಂಧಿಸಿದಂತೆ ದೂರುದಾರರು ನೊಂದಾಯಿತ ಗ್ರಾಹಕರ ಕುಟುಂಬ ಸದಸ್ಯರಾಗಿದ್ದು, ಅದಕ್ಕೆ ಪೂರಕವಾಗಿ ಬಿ.ಪಿ.ಎಲ್. ಪಡಿತರ ಚೀಟಿ ದೃಢೀಕೃತ ಪ್ರತಿಯನ್ನು ಲಗತ್ತಿಸಲಾಗಿದೆ. ಮುಂದುವರೆದು ಶ್ರೀ ರಾಜಶೇಖರ್, ಎ.ಇ.ಇ. ಮೂಡಿಗೆರೆ, ಇವರು ಚಿಕ್ಕಮಗಳೂರು ಕುಂದುಕೊರತೆ ನಿವಾರಣೆ

ವೇದಿಕೆಗೆ ನೀಡಿದ ಕಂಡಿಕೆವಾರು ಉತ್ತರದಲ್ಲಿ (ಅನೆಕ್ಸರ್ ಎ 10 ಬಿ) ಶ್ರೀ ರಾಮಯ್ಯ ಡಿ.ಆರ್.ಎಲ್. 19666, ಶ್ರೀ ರಾಮಚಂದ್ರ ಆರ.ಆರ.ಎಲ್. 28990 ಹಾಗೂ ಇತರ ದೂರುದಾರರ ಮನೆಗಳ ಆರ್.ಆರ್. ಸಂಖ್ಯೆಗಳನ್ನು ಒಪ್ಪಿಕೊಂಡು ಈಗ ಗ್ರಾಹಕರಲ್ಲವೆಂದು ಹೇಳುವುದು ಸಮಂಜಸವಲ್ಲ.

(ಡಿ) ಮಡ್ಡಿಕೆರೆ 63 ಕೆ.ವಿ.ವಿ. ವ್ಯಾಪ್ತಿಗೆ ಬರುವ ನೀರಾವರಿ ಪಂಪುಸೆಟ್ಟುಗಳನ್ನು ಗೃಹಬಳಕೆ ವಿದ್ಯುತ್‌ಗೆ  ಸಂಬಂಧಿಸಿದಂತೆ ಕೋರಿದಂತೆ ಸರಿಯಾಗಿ ಮಾಹಿತಿ ಮಾಹಿತಿ ನೀಡದೇ ಪರಿವರ್ತಕ ಮಂಜೂರಾಗಿ 3 ವರ್ಷಗಳಾದರೂ ಅಳವಡಿಸದೇ, ಮನವಿಗಳಿಗೆ ಸ್ಪಂದಿಸದೇ , ಆಯೋಗಕ್ಕೂ ದಾರಿ ತಪ್ಪಿಸುವಂತೆ ಉತ್ತರ ನೀಡಿ, ನಿಯಮದಂತೆ ಸರಿಯಾಗಿ ಕರ್ತವ್ಯ ನಿರ್ವಹಿಸದೇ, ಲೋಪವೆಸಗಿ ಶ್ರೀ ರಾಜಶೇಖರ್, ಎ.ಇ.ಇ.ಯವರೇ ಕಂಪನಿಯ ಘನತೆಗೆ ಧಕ್ಕೆ ತರುತ್ತಿದ್ದಾರೆಯೇ ಹೊರತು ಕೆ.ಇ.ಆರ್.ಸಿ ನಿಯಮದಂತೆ ನ್ಯಾಯ ಕೇಳಿದ ನನ್ನಿಂದಲ್ಲವೆಂಬ ಅಂಶವನ್ನು ಅವರ ಗಮನಕ್ಕೆ ತರಬಯಸುತ್ತೇನೆ.

(ಇ) ಇನ್ನು ನನ್ನ 5 ಹೆಚ್.ಪಿ. ನೀರಾವರಿ ಪಂಪುಸೆಟ್ಟಿಗೆ ಸಂಬಂಧಿಸಿದಂತೆ ಅಕ್ರಮ ಸಕ್ರಮ ಯೋಜನೆಯ ಯಡಿ ಅವರೇ ಸ್ಥಳ, ಬೆಳೆ ಪರಿಶೀಲಿಸಿ ಎಲ್.ಟಿ. ೪ಎ ಜಕಾತಿಯಲ್ಲಿ ಮಾಪಕ ಅಳವಡಿಸದೇ ಸಂಪರ್ಕ ನೀಡಿ ೨೦೦೯ ರವರೆಗೆ ಸ್ಥಾವರ ಪರಿಶೀಲಿಸಿ ವಿದ್ಯುತ್ ಬಿಲ್ಲನ್ನುಕಟ್ಟಿಸಿಕೊಂಡು ಮೀಟರ್ ಅಳವಡಿಸದೇ ಇದ್ದರೂ ಮೀಟರ್ ರೀಡಿಂಗ್ ತೋರಿಸಿ ಸರ್ಕಾರದಿಂದಲೂ ವಿದ್ಯುತ್ ಶುಲ್ಕವನ್ನು ವಸೂಲಿ ಮಾಡಿದ್ದಲ್ಲದೇ ಕೆ.ಇ.ಆರ.ಸಿ ನಿಯಮ ಪಾಲಿಸದೇ ಜಾಗ್ರತ ದಳದವರು ನೀಡಿದ ವರದಿಯನ್ನು ಪರಿಶೀಲಿಸದೇ ಡಿ.ಆರ್.ಐ.ಪಿ. 1252 ಸ್ಥಾವರಕ್ಕೆ ಮಾಪಕ ಅಳವಸಿಸುವಂತೆ ಸೇರಿ ಹಲವಾರು ಮನವಿ ಮಾಡಿಕೊಂಡರು ಯಾವುದಕ್ಕೂ ಸ್ಪಂದಿಸದೇ ಕರ್ತವ್ಯ ಲೋಪ ಸೇವಾ ನ್ಯೂನತೆ ಬಗ್ಗೆ ಚಿಕ್ಕಮಗಳೂರು ಗ್ರಾಹಕರ ವೇದಿಕೆಯಲ್ಲಿ ಪ್ರಕರಣ ವಿಚಾರಣೆಯಲ್ಲಿದ್ದು, ಆ ಬಗ್ಗೆ ಘನ ಆಯೋಗದಲ್ಲಿ ವಿಚಾರಣೆಗೆ ತೆಗೆದುಕೊಳ್ಳುವುದಾದರೆ ನಾನು ಬದ್ದನಾಗಿರುತ್ತೇನೆಂಬ ಅಂಶವನ್ನು ತಮ್ಮ ದಿವ್ಯ ಅವಗಾಹನೆಗೆ ತರಬಯಸುತ್ತೇನೆ.

(ಎಫ್) ಅಲ್ಲದೆ ಕೆ.ಇ.ಆರ್.ಸಿ ನಿಯಮದಂತೆ ಬ್ಯಾಕ್ ಬಿಲ್ಲಿನ ಶೇ 50 ರಷ್ಟನ್ನು ಕಟ್ಟಿ ಸಂಪರ್ಕ ಪಡೆದುಕೊಂಡು ನ್ಯಾಯಾಲಯದ ವಿಚಾರಣೆಗೆ ಬದ್ದನಾಗಿರುವುದಾಗಿ ಹೇಳಿ ಸಂಪರ್ಕ ನೀಡಲು ಮನವಿ ಮಾಡಿಕೊಂಡರೂ ಇದುವರೆಗೆ ಮನವಿಗೆ ಸ್ಪಂದಿಸದೇ ನಾನು ಕೆ.ಇ.ಆರ್.ಸಿ ನಿಯಮದಂತೆ ಪ್ರತಿನಿಧಿಯಾಗಿ ನ್ಯಾಯ ಕೇಳುತ್ತಿರುವುದಕ್ಕೆ ಉದ್ದೇಶಪೂರ್ವಕವಾಗಿ ನನಗೆ ತೊಂದರೆ ಕೊಡುತ್ತಿರುವ ವಿಚಾರವನ್ನು ತಮ್ಮ ಅವಗಾಹನೆಗೆ ತರಬಯಸುತ್ತೇನೆ.

6. ದೂರುದಾರರ ಪ್ರತಿನಿಧಿ ಶ್ರೀ ನಾಗೇಶ್‌ಗೌಡರು ದಿನಾಂಕ 18.04.2017 ಹಾಗೂ 3.08.2017 ಪತ್ರಗಳಲ್ಲಿ ವಿದ್ಯುತ್ ಇಲಾಖೆಯು ಯಾವುದೇ ರೀತಿಯ ಜವಾಬ್ದಾರಿಯುತ ಕರ್ತವ್ಯ ನಿರ್ವಹಿಸದೇ ನಿಯಮಗಳನ್ನು ಪಾಲಿಸದೇ ಲೋಪಗಳನ್ನು ಎಸೆಗಿದ್ದಾರೆಂದು ಮತ್ತೊಮ್ಮೆ ದಿನಾಂಕ 19.12.1016ರ ಮೇಲ್ಮನವಿ ಪತ್ರದಲ್ಲಿನ ಅಂಶಗಳನ್ನು ಉಲ್ಲೇಖಿಸಿ ಪುನರುಚ್ಚರಿಸಿದ್ದಾರೆ.

7. ಚಿಕ್ಕಮಗಳೂರು ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ ರವರು ಹೊರಡಿಸಿರುವ ದಿನಾಂಕ 31.03.2016 ರ ಆದೇಶವನ್ನು ಗಮನಿಸಿದೆ.

8. ಅಪೀಲ್‌ದಾರರು ಹಾಗೂ ಪ್ರತಿವಾದಿಗಳು ಮಂಡಿಸಿರುವ ಲಿಖಿತ ವಾದಗಳು ಹಾಗೂ ಎಲ್ಲಾ ಪತ್ರಗಳಲ್ಲಿನ ವಿವರಗಳನ್ನು ಗಣನೆಗೆ ತೆಗೆದುಕೊಂಡಿದೆ. ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ ರವರು ಪ್ರಕರಣದ ಬಗ್ಗೆ ಅರ್ಜಿದಾರರು ನಿವೇದಿಸಿಕೊಂಡಿರುವ ತೊಂದರೆಗಳನ್ನು ಹಾಗೂ ವಿದ್ಯುತ್ ಪೂರೈಕೆ ಮಾಡಲು ಆಗಿರುವ ವ್ಯತ್ಯಯಗಳ ಬಗ್ಗೆ ಕೂಲಂಕುಷವಾಗಿ ಪರಿಶೀಲನೆ ಮಾಡಬೇಕಿತ್ತು. ಅಪೀಲುದಾರರು ಸಲ್ಲಿಸಿರುವ ಹಾಗೂ ಮಾಡಿರುವ ವಾದ, ದಾಖಲೆಗಳಲ್ಲಿ, ಇಲಾಖೆಯ ಅಧಿಕಾರಿಗಳ ಕರ್ತವ್ಯ ಲೋಪದ ಬಗ್ಗೆ ಹೆಚ್ಚಾಗಿ ಉಲ್ಲೇಖವಾಗಿದೆ. ಈ ಪ್ರಕರಣದಲ್ಲಿ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ ರವರು ಸ್ಥಳ ತನಿಖೆ ಮಾಡಿ ವಿದ್ಯುತ್ ಪೂರೈಕೆಯ ಬಗ್ಗೆ ಆಗಿರುವ ಸಮಸ್ಯೆಗಳ ಬಗ್ಗೆ ಸತ್ಯಾಸತ್ಯತೆಗಳನ್ನು ತಿಳಿದುಕೊಂಡು ಮೊತ್ತೊಮ್ಮೆ ದೀರ್ಘವಾದ ಆದೇಶ ಮಾಡುವುದು ಸೂಕ್ತವೆಂದು ಈ ಪ್ರಾಧಿಕಾರ ಅಭಿಪ್ರಾಯ ಪಡುತ್ತದೆ.

9. ಅಂತೆಯೇ ದೂರುದಾರರು ಸಲ್ಲಿಸಿರುವ ಈ ಅಪೀಲನ್ನು ಪುರಸ್ಕರಿಸಿ, ಮೇಲಿನ ಅಭಿಪ್ರಾಯದ ಹಿನ್ನಲೆಯಲ್ಲಿ ಪ್ರಕರಣವನ್ನು ಸೂಕ್ತ ರೀತಿಯಲ್ಲಿ ಪುನರ್ ವಿಚಾರಣೆ ಮಾಡಿ, ಪ್ರಚಲಿತ

ನಿಯಮಗಳಂತೆ ಶೀಘ್ರವಾಗಿ ಆದೇಶ ಹೊರಡಿಸಲು ಕುಂದು ಕೊರತೆಗಳ ವಿಚಾರಣಾ ವೇದಿಕೆ, ಚಿಕ್ಕಮಗಳೂರು ರವರಿಗೆ ಮರಳಿಸಿ ಆದೇಶಿಸಿದೆ.

ಸಹಿ/–

**(ಬಿ.ಎನ್. ಕೃಷ್ಣಯ್ಯ)**
**ವಿದ್ಯುಚ್ಛಕ್ತಿ ಲೋಕಪಾಲರು**

ಗೆ:

1. ಶ್ರೀ ಎಂ.ಎಸ್.ನಾಗೇಶ್‌ಗೌಡ, ಮಡ್ಡಿಕೆರೆ, ಬೆಳ್ಳೂರು ಅಂಚೆ, ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ.

2. ಸಹಾಯಕ ನಿರ್ವಾಹಕ ಇಂಜಿನಿಯರ್ (ನಿರ್ವಹಣೆ ಮತ್ತು ಪಾಲನೆ), ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿ. (ಮೆಸ್ಕಾಂ), ಮೂಡಿಗೆರೆ ಉಪ–ವಿಭಾಗ, ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ.

3. ಆಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿ. (ಮೆಸ್ಕಾಂ), ಅಧೀಕ್ಷಕ ಇಂಜಿನಿಯರ್ ರವರ ಕಛೇರಿ, ನಿರ್ವಹಣೆ ಮತ್ತು ಪಾಲನೆ ವೃತ್ತ , ಮಧುವನ್ ಬಡಾವಣೆ ರಸ್ತೆ, ಚಿಕ್ಕಮಗಳೂರು – 577 101

4. ಸರಬರಾಜು ಕಂಪನಿಗಳ ವ್ಯವಸ್ಥಾಪಕ ನಿರ್ದೇಶಕರುಗಳಿಗೆ

5. ಮಾನ್ಯ ಆಧ್ಯಕ್ಷರು, ಕೆ.ಇ.ಆರ್.ಸಿ ರವರ ಆಪ್ತ ಕಾರ್ಯದರ್ಶಿ

6. ಮಾನ್ಯ ಸದಸ್ಯರು (ಎ), ಕೆ.ಇ.ಆರ್.ಸಿ ರವರ ಆಪ್ತ ಕಾರ್ಯದರ್ಶಿ

7. ಮಾನ್ಯ ಸದಸ್ಯರು (ಎಂ), ಕೆ.ಇ.ಆರ್.ಸಿ ರವರ ಆಪ್ತ ಕಾರ್ಯದರ್ಶಿ

೮. ಕಾರ್ಯದರ್ಶಿ, ಕೆ.ಇ.ಆರ್.ಸಿ.

******